ಭೂತ' ಕವನದಲ್ಲಿ ವ್ಯಕ್ತಿತ್ವದ ವಿಕಾಸಕ್ಕೆ ವೈಯಕ್ತಿಕ ಮಾತ್ರವಲ್ಲ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನೂ ಕೊಟ್ಟಿರುವುದರಿಂದ ಇದು ಅಡಿಗರ ಶ್ರೇಷ್ಠ ಕವನಗಳಲ್ಲಿ ಒಂದು ಎಂದು ಮಾನ್ಯವಾಗಿದೆ. ಅಲ್ಲದೆ ಇದು ಹಲವು ವಿಮರ್ಶಕರಿಂದ ಹಲವು ಬಗೆಯ ವ್ಯಾಖ್ಯಾನಗಳಿಗೆ ತೆರೆದುಕೊಂಡಿದೆ. ಈ ಕವನದಲ್ಲಿ ಇತಿಹಾಸವನ್ನು (ಭೂತಕಾಲವನ್ನು) ನಮ್ಮ ಬದುಕಿಗೆ ಸ್ವೀಕರಿಸಬೇಕಾದ ರೀತಿಯನ್ನು ಅಡಿಗರು ಹೇಳುತ್ತಾರೆ. ಪಶ್ಚಿಮದ ಪ್ರಭಾವಕ್ಕೊಳಗಾಗಿ ಮಂತ್ರ ಮರೆತು, ಬರಿದೇ ತರ್ಪಣದ ತಂತ್ರದಿಂದ ಮಂತ್ರದಂಡವನ್ನಷ್ಟೇ ಆಡಿಸುತ್ತಿರುವ ಜನಾಂಗವು "ಇನ್ನಾದರೂ ಪೂರ್ವಮೀಮಾಂಸೆ ಕರ್ಮಕಾಂಡಗಳನ್ನು ಬಗೆಯಬೇಕು" ಎನ್ನುವುದು ಕವನದ ನಿಲುವು. ಬಾವಿಯೊಳಗಿನ ಕೊಳೆವ ನೀರು (ಭೂತಕಾಲ) ಆವಿಯಾಗಿ ಮೇಲೇರಿ, ಮಳೆಯಾಗಿ ವರ್ತಮಾನಕ್ಕೆ ಒದಗಲಿ; `ಭತ್ತಗೋದುವೆ ಹಣ್ಣು ಬಿಟ್ಟ ವೃಂದಾವನ, ಗುಡಿಗೋಪುರಗಳ ಬಂಗಾರ ಶಿಖರ' (ಇದು ಕಷ್ಟಪಟ್ಟು ಸಾಧಿಸಿದ ಅಪರಂಜಿ ವಿದ್ಯೆಯ ಫಲ) ಇವುಗಳು ಬದುಕನ್ನು ಸುಂದರಗೊಳಿಸಲಿ ಎಂಬ ಆಶಯ ಇಲ್ಲಿದೆ.

'ಭೂತ' ಕವನದ ಮೊದಲನೆಯ ಭಾಗದಲ್ಲಿ ಹಳೆಯ ಬಾವಿಯ ಹೂಳೆತ್ತುವ ಕಾರ್ಯದ ಚಿತ್ರಣವಿದೆ. ( ದಕ್ಷಿಣ ಕನ್ನಡದ ಹಳ್ಳಿಯ ಮನೆಗಳ ಅಂಗಳದ ಈಶಾನ್ಯದಲ್ಲಿ ಬಾವಿ ಇರುತ್ತದೆ. ಅದಕ್ಕೆ ಸಮೀಪವಾಗಿ, ಈಶಾನ್ಯದಲ್ಲಿಯೇ ತುಳಸಿ ವೃಂದಾವನ (ತುಳಸಿಕಟ್ಟೆ. 'ಬೃಂದಾವನ' ಎಂದೂ ಹೇಳುವುದುಂಟು) ಇರುತ್ತದೆ. ಬಾವಿಯ ಹೂಳೆತ್ತುವ ಕಾರ್ಯ ಸಾಮಾನ್ಯವಾಗಿ ನಾಲ್ಕೈದು ವರ್ಷಗಳಿಗೊಮ್ಮೆ ಮೇ ತಿಂಗಳಲ್ಲಿ ನಡೆಯುತ್ತದೆ. ಆಗ ಬಾವಿಯಲ್ಲಿ ನೀರು ಒಂದಡಿ, ಎರಡಡಿ ಮಾತ್ರ ಇರುತ್ತದೆ. ಇದ್ದ ನೀರನ್ನು ಬತ್ತಿಸಿ ತಳದಲ್ಲಿ ಜಮೆಯಾಗಿರುವ ಕೆಸರನ್ನು, ಅದರಲ್ಲಿ ಸೇರಿಕೊಂಡಿರುವ ವಸ್ತುಗಳ ಸಹಿತ ಬಾವಿಗಿಳಿದ ಕೆಲಸಗಾರ/ರು ಹೆಡಿಗೆಗಳಲ್ಲಿ ತುಂಬಿಸಿಕೊಟ್ಟಂತೆ ಮೇಲೆ ನಿಂತ ಕೆಲಸಗಾರರು ಅದನ್ನು ಸೇದಿ ಸ್ವಲ್ಪ ದೂರ - ತೋಟಕ್ಕೆ - ಚೆಲ್ಲಿ ಬರುತ್ತಾರೆ. ಈ ಕಾರ್ಯವನ್ನು ಮನೆಯ ಮಕ್ಕಳು ಬಾವಿಯ ದಂಡೆಯ ಮೇಲೆ ಒರಗಿ, ಬಾಗಿ ಬಾವಿಯೊಳಕ್ಕೆ ನೋಡುತ್ತಾ ಗಮನಿಸುತ್ತಿರುತ್ತಾರೆ. ಆಗ ಸೂರ್ಯ ಕಿರಣ ಓರೆಯಾಗಿ ಬಾವಿಯೊಳಗೆ ಬೀಳುವ ಚಿತ್ರ ಕವಿ ಅಡಿಗರ ಮನಸ್ಸಿನಲ್ಲಿ ಗಟ್ಟಿಯಾಗಿ ಕುಳಿತಿತ್ತೆಂದು ಇಲ್ಲಿನ ಚಿತ್ರಣ ನೋಡಿದಾಗ ತಿಳಿಯುತ್ತದೆ. ಹಳಸಲು ಗಾಳಿ ಮೇಲೆ ಬರುತ್ತಿದೆಯೇನೋ ಎಂಬಂತೆ ಆ ಬೆಳಗಿನ ಶಲಾಖೆಗಳಲ್ಲಿ ಆವಿ ಮೇಲೆ ಬರುವುದು ಹೊಳೆದು ಕಾಣಿಸುವುದುಂಟು. ಅದು ಪಕ್ಕದ ತುಳಸಿಕಟ್ಟೆಯ ತುಳಸಿ ಹೊದರಿಗೂ ಹಾಯುವುದು.

ಮಕ್ಕಳು ಕೆಳಗಿನ ಕೆಸರಿನಲ್ಲಿ ಉತ್ಖನನವಾಗುವ ವಸ್ತುಗಳಿಗಾಗಿ ಚೂಪುಗಣ್ಣು ಮಾಡಿಕೊಂಡು ಕಾಯುತ್ತಿರುತ್ತಾರೆ. (ಅವರ ಆಟಿಕೆಯ ಸಾಮಗ್ರಿಗಳೂ ಹೀಗೆ ಲಭ್ಯವಾಗುವುದುಂಟು). ಆಗ, "ಕತ್ತಲಲ್ಲೇ ಕಣ್ಣುನೆಟ್ಟು ತಡಕುವ ನನಗೆ ಹೊಳೆವುದು ಹಠಾತ್ತನೊಂದು ಚಿನ್ನದ ಗೆರೆ. ಅಮವಾಸ್ಯೆ ಕಂದಕಗಳಲ್ಲಿ ಹೇಗೋ ಬಿದ್ದು ಒದ್ದಾಡುತ್ತಿರುವ ಗರಿ ಸುಟ್ಟ ತಾರೆ". ಹಳ್ಳಿಯ ನಂಬಿಕೆಗಳಲ್ಲಿ ಒಂದು, ನಕ್ಷತ್ರಗಳು ಉರಿದು (ಉಲ್ಕೆ) ಬೀಳುವಾಗ ಕೆಸರಿಗೆ ಅಥವಾ ಗೊಬ್ಬರದ ರಾಶಿಗೆ ಬಿದ್ದರೆ ಅದು ಚಿನ್ನವಾಗುತ್ತದೆ ಎನ್ನುವುದು. ಅಂತಹದೇನೋ ಹೊಳೆಯುವ ವಸ್ತು ಕೆಳಗಿನ ಕೆಸರಿನಲ್ಲಿ ಬಾಲಕನ ಕಣ್ಣಿಗೆ ಬಿದ್ದಿದೆ. ಈ ಚಿತ್ರಣವು ಯಾವುದಕ್ಕೆ ರೂಪಕವಾಗಿದೆ ಎಂದು ಯೋಚಿಸಬೇಕು. ಈ ಹೂಳೆತ್ತುವ ಕಾರ್ಯದ ಪರಿಣಾಮವಾಗಿ ಮುಂದಿನ ಕೆಲವು ವರ್ಷಗಳ ಕಾಲ ಬಾವಿಯಲ್ಲಿ ಶುದ್ಧವಾದ ನೀರಿನ ಒರತೆ ಹುಟ್ಟುತ್ತದೆ.

ಒರತೆಗಳ ಬಾಯಿಗೆ ಅಡ್ಡಿಯಾಗಿದ್ದ ಕೆಸರು, ಕಸ ಕಡ್ಡಿಗಳನ್ನೆಲ್ಲ ತೆಗೆದ ಕಾರಣ ಪರಿಶುದ್ಧವಾದ ಜಲ ಉಕ್ಕಿ ಬರುತ್ತದೆ. ಹಾಗೆಯೇ ನಮ್ಮ ತತ್ವ, ಚಿಂತನೆಗಳನ್ನು, ಪಾರಂಪರಿಕ ನಂಬಿಕೆಗಳನ್ನು ಹೊಸದಾಗಿ ಪರೀಕ್ಷಿಸಿಕೊಳ್ಳಬೇಕು; ಬದುಕಿಗೆ ಉಪಯುಕ್ತವಾಗುವಂತೆ ಪರಿಷ್ಕರಿಸಿಕೊಳ್ಳಬೇಕು. ಬಾವಿಯೊಳಗಿನ ಹಳಸು ಗಾಳಿಗೆ ಶುದ್ಧವಾದ ತುಳಸಿ ಬೃಂದಾವನದ ಸಂಪರ್ಕವಾಗಿ ಅದು ಕೂಡ ಊರ್ಧ್ವಗತಿಯನ್ನು ಪಡೆಯುತ್ತದೆ. ಇಂತಹ ಆವಿಗಳೆ ಮುಂದೆ ಮೋಡಗಳಾಗಿ ಮಳೆಸುರಿದು ಹೊಸ ಬೆಳೆಗೆ ಕಾರಣವಾಗುವುದು ಇನ್ನೊಂದು ಬಗೆಯ ಹೊಸದಾಗುವಿಕೆ - ಭೂತವನ್ನು ವರ್ತಮಾನದ ಮೂಲಕ ಭವಿಷ್ಯಕ್ಕೆ ಅಣಿಗೊಳಿಸುವುದು.

ಎರಡನೆಯ ಭಾಗದಲ್ಲಿ ವ್ಯಕ್ತಿಯ ಅಂತರಂಗದಲ್ಲಿ ಅಥವಾ ಸುಪ್ತಪ್ರಜ್ಞೆಯಲ್ಲಿ ಅದುಮಿಟ್ಟ ವಿಕೃತಿಗಳೂ ಹೀಗೆಯೇ ಬಿಡುಗಡೆ ಪಡೆಯಬೇಕಾದ ಅಗತ್ಯವನ್ನು ಸೂಚಿಸಲಾಗಿದೆ. ನಮ್ಮ ವರ್ತಮಾನದ ವರ್ತನೆಗಳಿಗೆ ಭೂತಕಾಲದ ಸಂಗತಿಗಳ ಪ್ರಭಾವ ಇರುತ್ತದೆ ಎಂದು ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ತೋರಿಸಿಕೊಟ್ಟಿದ್ದ. ಈ ಮನೋವೈಜ್ಞಾನಿಕ ತಿಳಿವಳಿಕೆ ನವ್ಯ ಸಾಹಿತ್ಯದಲ್ಲಿ ಬಹಳ ಚಲಾವಣೆಯಲ್ಲಿತ್ತು. 'ನೀರ ಮೇಲಕ್ಕೊಂದು ಮಡಿ, ಕೆಳಕ್ಕೇಳು ಮಂಜಿನ ಶಿಖರಿ' ಎನ್ನುವುದು ಮನಸ್ಸಿನ ರಚನೆಯನ್ನು ಹೇಳಲು ಸಿಗ್ಮಂಡ್ ಫ್ರಾಯ್ಡ್ ಹೇಳಿದ ರೂಪಕ. ಮನಸ್ಸಿನಲ್ಲಿ ನಮ್ಮ ವರ್ತನೆ ಅಥವಾ ಪ್ರಜ್ಞೆಯದು ಮೇಲಿನ ಸ್ವಲ್ಪವೇ ಭಾಗ, ಅದು ನೀರಲ್ಲಿ ಮುಳುಗಿದ ಮಂಜುಗಡ್ಡೆಯ ಹಾಗೆ; ಅದರಲ್ಲಿ ಅಂತಃಪ್ರಜ್ಞೆಯ ಭಾಗ - ಸುಪ್ತಪ್ರಜ್ಞೆಯ ಭಾಗಗಳು ಹೆಚ್ಚು. ಇವುಗಳನ್ನು, conscious mind, unconscious mind, superconscious mind ಇತ್ಯಾದಿಯಾಗಿ ಹೆಸರಿಸಿದ್ದಾರೆ.

ಬಾವಿಯ ಒಸರು ಆವಿಯಾಗಿ ಆಕಾಶಕ್ಕೆ ಸೇರಿ ಮಳೆಯಾಗಿ ಮರುಹುಟ್ಟು ಪಡೆಯುವುದು (ಮತ್ತೆ ನೆಲದಾಳಕ್ಕೆ ಹೋಗಿ ಒಸರಾಗುವುದು) ಒಂದು ವೃತ್ತವಾದರೆ, ಆತ್ಮಗಳು ಬೀಜಾಣುಗಳಾಗಿ ಜನ್ಮಪಡೆದು ಬದುಕಿ ಸತ್ತು ಪ್ರೇತಗಳಾಗಿ ಊರ್ಧ್ವಗತಿಯನ್ನು ಪಡೆದು ಮರುಜನ್ಮ ಪಡೆಯುವುದು ಇನ್ನೊಂದು ಬಗೆಯ ವೃತ್ತ. ಇವು ಎರಡು ರೂಪಕಗಳು. ಮೂರನೆಯದು ಮನಸ್ಸಿನಾಳದಲ್ಲಿದ್ದದ್ದು ಹೊರಗೆ ಬಂದು ಸುಸಂಸ್ಕೃತ ಅಭಿವ್ಯಕ್ತಿಗಳಾಗಿ ಬಿಡುಗಡೆ ಪಡೆಯುವುದು. ಇದು ಮೊದಲಿನ ಎರಡಕ್ಕೆ ಹೋಲಿಕೆಯಲ್ಲದೆ ಇದ್ದರೂ ಆ ಪ್ರಕ್ರಿಯೆ ಇಲ್ಲಿಯೂ ನಡೆಯುತ್ತದೆ. ಹಾಗಾಗಿ ಮನಸ್ಸಿನಾಳದ 'ಭೂತ'ದ ಹಳವಂಡಗಳಿಗೆ ಮುಕ್ತಿಯಾಗುವ ಪ್ರಕ್ರಿಯೆಗೆ ಮೊದಲಿನ ಎರಡನ್ನು ರೂಪಕಗಳಾಗಿ ಬಳಸುವುದು ಸೂಕ್ತವಾಗಿದೆ. ಈ ಕವನದಲ್ಲಿ ಈ ಮೂರೂ ಆಯಾಮಗಳು ಇರುವುದರಿಂದ ವ್ಯಕ್ತಿ, ಸಮಾಜ ಮತ್ತು ಸಂಸ್ಕೃತಿ ಎನ್ನುವ ಮೂರು ಆಯಾಮಗಳನ್ನು ಕವನವು ಸ್ಪರ್ಶಿಸುತ್ತದೆ ಎಂದು ತಿಳಿಯಬಹುದು.

ಮೂರನೆಯ ಭಾಗದಲ್ಲಿ ಪ್ರೇತಾತ್ಮಗಳು ಊರ್ಧ್ವಗತಿಯನ್ನರಿಯದೆ ತೊಳಲುವ ಚಿತ್ರಣವಿದೆ. ಅವುಗಳಿಗೆ ಸದ್ಗತಿಯನ್ನು ತೋರಿಸುವ ವಿಧಿಗಳಿಗೆ ಸಂಬಂಧಿಸಿದ ಮಂತ್ರ, ತಂತ್ರಗಳು ಧಾರ್ಮಿಕ ಗ್ರಂಥಗಳಲ್ಲಿರುತ್ತವೆ. ಅವುಗಳನ್ನು ಈ ಕವನದ ಸಾಕ್ಷೀಪ್ರಜ್ಞೆ ಎನ್ನಬಹುದಾದ ನಾಯಕ ಮರೆತಿದ್ದಾನೆ. ಅವನು ಪಶ್ಚಿಮಬುದ್ಧಿಯಾಗಿರುವ ಕಾರಣ, ತಿಲಹೋಮ ಮುಂತಾದ ಪ್ರೇತೋದ್ಧಾರ ವಿಧಿಗಳಲ್ಲಿ ಪುರೋಹಿತರು ಹೇಳಿದಂತೆ ಕೈಕರಣಗಳನ್ನು ಮಾತ್ರ ಆಚರಿಸಲು ಬಲ್ಲ; ಯಾವ ಮಂತ್ರಗಳನ್ನೂ, ಅದರ ಅರ್ಥಗಳನ್ನೂ ಬಲ್ಲವನಲ್ಲ. ಈ ಆಚರಣೆಯನ್ನು ಪ್ರಾತಿನಿಧಿಕವಾಗಿ ಮತ್ತು ರೂಪಕವಾಗಿ ಕವಿ ಬಳಸಿದ್ದಾರೆ. ಯಾವುದೇ ಪಾರಂಪರಿಕ ಜ್ಞಾನಕ್ಕೆ ನಾವು ವಾರಸುದಾರರಾಗಿಲ್ಲ ಎನ್ನುವುದು ಈ ಭಾಗದ ಸೂಚನೆ. ಅಂತಹ ಜ್ಞಾನದ ಖನಿಗಳನ್ನು

ಬಗೆದು ಜ್ಞಾನವನ್ನು ಸಂಪಾದಿಸಬೇಕು. ಅದನ್ನು ಹೊಸದಾಗಿ ಪರಿಶೀಲಿಸಿ ಬಳಸಲು ಉಪಯುಕ್ತವಾಗುವಂತೆ ಪರಿಷ್ಕರಿಸಬೇಕು. ಹೀಗೆ ಪರಿಷ್ಕರಿಸುವುದನ್ನು ಒಂದು ರೂಪಕದ ರೀತಿಯಲ್ಲಿ ಹೇಳಲಾಗಿದೆ: ಚಿತ್ತ ಸಿಗಬೇಕಾದರೆ ಮಣ್ಣನ್ನು ಅಗೆದು ಚಿನ್ನದದಿರನ್ನು ಸುಟ್ಟು ಸೋಸಿ ಶುದ್ಧ ಚಿನ್ನವನ್ನು ಪಡೆಯುವ ಹಾಗೆ ಈ ಪ್ರಾಚೀನ ಜ್ಞಾನಗಳನ್ನು ಶೋಧಿಸಿ ನಮಗೆ ಉಪಯುಕ್ತವಾಗುವಂತೆ ಬಳಸಿಕೊಳ್ಳಬೇಕು.

ಕೊನೆಯ ಭಾಗದಲ್ಲಿ ಮೊದಲಿನ ಮೂರೂ ಭಾಗಗಳಲ್ಲಿರುವ ರೂಪಕಗಳನ್ನು (ಬಾವಿ - ಅಂತರಪಿಶಾಚಿ - ಅಪರಂಜಿವಿದ್ಯೆ) ಬಳಸಿಕೊಂಡು ಈ ಭಾಗದಲ್ಲಿ ಅವುಗಳನ್ನು ಪ್ರತಿಮೆಗಳಾಗಿ ಬೆಳೆಸಲಾಗಿದೆ. ಬಾವಿಯ ಆವಿ ಕಾರಣಶರೀರ (ಸೂಕ್ಷ್ಮಶರೀರ)ವಾಗಿ ಕಾರ್ಮುಗಿಲಲ್ಲಿ ಸೇರಿಕೊಳ್ಳುತ್ತದೆ. ಅದು ಅಂತರಪಿಶಾಚಿ. ಅದರ ತಲ್ಲಣಗಳೇ ಗುಡುಗುಸಿಡಿಲುಗಳು. ಕೊನೆಗೆ ವರ್ಷಧಾರೆಯಾಗಿ ಸುರಿಯುವುದು ಮಳೆ - ಪುನರ್ಜನ್ಮ. ಇದರಿಂದ ಬೆಳೆಯುವುದು ಅನ್ನ. ಬದುಕಿನ ಮೂಲಾಧಾರ. ಇನ್ನು ಬದುಕಿಗೆ ಚಿಂತನೆ ಸೌಂದರ್ಯಾನುಭೂತಿ ಇವೆಲ್ಲ ಬೇಕಲ್ಲ - ಅವು ಈ ಅಪರಂಜಿ ವಿದ್ಯೆಯಿಂದ ಸಾಧಿಸಿದ ಗುಡಿಗೋಪುರಗಳ ಚಿನ್ನದ ಕಲಶಗಳಾಗಿ ಕಂಗೊಳಿಸುತ್ತವೆ. ಇಲ್ಲಿ ಮೂರು ಆಯಾಮಗಳಲ್ಲಿ ಭೂತವು ವರ್ತಮಾನವನ್ನು ಅರ್ಥಪೂರ್ಣವಾಗಿಸುವುದು ಹೇಗೆಂಬ ಚಿಂತನೆಯನ್ನು ಪ್ರತಿಮೆಗಳ ರೂಪದಲ್ಲಿ ಕವನ ಅಂತರ್ಗತ ಮಾಡಿಕೊಂಡಿದೆ. ಇವೆಲ್ಲವೂ ಅಂತಿಮವಾಗಿ ವ್ಯಕ್ತಿತ್ವದ ವಿಕಾಸಕ್ಕೆ ಸಂಬಂಧಿಸಿವೆ.